C.R.P.67

Form No.4 (Civil)
Deposition Sheets
(R.P.No.57)

# 6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

## ಎಸ್ ಸಿ ಸಂಖ್ಯೆ: 277/2018

**ಪ್ರಾಸಾ.3 ಚಾಸಾ.5**

| | | |
|---|---|---|
| **ಸಾಕ್ಷಿದಾರರ ಹೆಸರು** | : | ಆರ್. ಕಿರಣ್ |
| **ತಂದೆ/ಗಂಡನ ಹೆಸರು** | : | ಲೇಟ್ ಎ.ಎಸ್. ರಾಜು |
| **ವಯಸ್ಸು** | : | 41 ವರ್ಷಗಳು |
| **ಉದ್ಯೋಗ** | : | ಎಸ್‌ಡಿಎ, ನೀರಾವರಿ ಇಲಾಖೆ, ಗೊರುರು |
| **ವಾಸ** | : | ಗೊರುರು |

## ಪ್ರಮಾಣ ವಚನ ಬೋಧಿಸಿದ ದಿನಾಂಕ: 18.07.2022

## ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನನಗೆ ಚಾಸಾ-2 ರಿಂದ 4 ಗೊತ್ತು. ಅವರು ನನ್ನ ಸ್ನೇಹಿತರು. ಚಾಸಾ-6 ನನ್ನ ತಾಯಿ. ಮೃತ ಅನೀಲ್ ನನ್ನ ತಮ್ಮ. 2017 ರಲ್ಲಿ ನನ್ನ ತಾಯಿ ಮತ್ತು ನನ್ನ ತಮ್ಮ ಅನೀಲ್ ಬೆಂಗಳೂರಿನ ಭುವನೇಶ್ವರಿ ನಗರದಲ್ಲಿ ಒಟ್ಟಿಗೆ ವಾಸ ಮಾಡಿಕೊಂಡಿದ್ದರು. ನನ್ನ ತಮ್ಮ ಅನೀಲ್ ಕೊಟ್ಯಾಕ್ ಮಹಿಂದ್ರ ಬ್ಯಾಂಕಿನಲ್ಲಿ ಅಸಿಸ್ಟೆಂಟ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದ.

2. ದಿನಾಂಕ 03.12.2017 ರಂದು ಸಂಜೆ 4.30 ಕೆ ನನ್ನ ತಾಯಿ ನನಗೆ ಫೋನ್

ಮಾಡಿ, ನನ್ನ ತಮ್ಮ ಅನೀಲ್ ಮನೆಯಿಂದ ಹೊರಗಡೆ ಹೋಗಿದ್ದ, ವಾಪಸ್ ಮನೆಗೆ ಬಂದಿರುವುದಿಲ್ಲ, ಫೋನ್ ಮಾಡಿದರೆ ಫೋನ್ ನ್ನು ಸ್ವೀಕರಿಸುತ್ತಿಲ್ಲ ಎಂದು ತಿಳಿಸಿದರು. ಆಗ ನಾನು ನನ್ನ ತಾಯಿಗೆ ಅನೀಲ್ ತನ್ನ ಸ್ನೇಹಿತರೊಂದಿಗೆ ಹೋಗಿರಬಹುದು, ವಿಚಾರಿಸಿ ನೋಡೋಣ ಎಂದು ತಿಳಿಸಿದೆ. ಆ ದಿವಸ ನನ್ನ ತಮ್ಮಮನೆಗೆ ವಾಪಸ್ ಬರಲಿಲ್ಲ. ಮಾರನೇ ದಿವಸ ಬೆಳಗ್ಗೆ ನಾನು ಮತ್ತು ನನ್ನ ತಾಯಿ ಚೆನ್ನಮ್ಮನಕೆರೆ ಅಚ್ಚುಕಟ್ಟು ಪೊಲೀಸ್ ಠಾಣೆಗೆ ಹೋಗಿ, ನನ್ನ ತಮ್ಮ ಕಾಣೆಯಾಗಿರುತ್ತಾನೆ ಎಂದು ನಮ್ಮ ತಾಯಿಯ ಹೆಸರಿನಲ್ಲಿ ದೂರು ನೀಡಿದೆವು. ನಾನು ನನ್ನ ತಮ್ಮನ ಸ್ನೇಹಿತರು ಮತ್ತು ನನ್ನ ಸಂಬಂಧಿಕರಲ್ಲಿ ವಿಚಾರಿಸಿದಾಗ ಅವರು ಅನೀಲ್ ನನ್ನು ನೋಡಿರುವುದಿಲ್ಲ ಎಂದು ತಿಳಿಸಿದರು. ನನ್ನ ತಮ್ಮನಿಗೆ 21.01.2018 ರಂದು ಸೋಮವಾರಪೇಟೆಯ ನೇತ್ರಾವತಿ ಎಂಬ ಹುಡುಗಿಯ ಜೊತೆ ಮದುವೆ ನಿಗದಿಯಾಗಿತ್ತು. 3 ತಿಂಗಳುಗಳ ಹಿಂದೆ ನೇತ್ರಾವತಿ ಮತ್ತು ನನ್ನ ತಮ್ಮನಿಗೆ ನಿಶ್ಚಿತಾರ್ಥ ಆಗಿತ್ತು.

3. ದೂರು ಕೊಟ್ಟ ನಂತರ, ಅದೇ ದಿವಸ ಸಂಜೆ ಕಗ್ಗಲೀಪುರ ಪೊಲೀಸ್ ಠಾಣೆಯವರು ನನಗೆ ಕರೆ ಮಾಡಿ, ತಮ್ಮ ವ್ಯಾಪ್ತಿಯಲ್ಲಿ ಒಂದು ಶವ ಸಿಕ್ಕಿರುತ್ತದೆ. ಶವದ ಮೇಲೆ ನೀಲಿ ಬಣ್ಣದ ಟಿ ಶರ್ಟಮತ್ತು ಜೀನ್ಸ್ ಪ್ಯಾಂಟ್ ಇರುತ್ತದೆ ಮತ್ತು ಆಧಾರ್ ಕಾರ್ಡ್ ಮತ್ತು ಎಟಿಎಂ ಕಾರ್ಡ್ ಗಳು ಸಿಕ್ಕಿರುತ್ತದೆ, ನೀವು ಬಂದು ಶವವನ್ನು ಗುರುತಿಸಿ ಎಂದು ತಿಳಿಸಿದರು. ಪೊಲೀಸರವರು ಕಾರ್ಡ್ ಮೇಲೆ ಇದ್ದ ಹೆಸರನ್ನು ಓದಿ ತಿಳಿಸಿದಾಗ, ನಾನು ಪೊಲೀಸರಿಗೆ ಶವ ನನ್ನ ತಮ್ಮನದು ಎಂದು ತಿಳಿಸಿರುತ್ತೇನೆ. ನಂತರ ನಾನು ಮತ್ತು ನನ್ನ ತಾಯಿ ನನ್ನ ತಮ್ಮನ ಶವವನ್ನು ನೋಡಲು ರಾಜರಾಜೇಶ್ವರಿ ಆಸ್ಪತ್ರೆಗೆ ಹೋಗಿರುತ್ತೇವೆ. ಶವ ಸದರಿ ಆಸ್ಪತ್ರೆಯ ಶವಗಾರದಲ್ಲಿ ಇತ್ತು. ಶವವನ್ನು ನೋಡಿ, ನನ್ನ ತಮ್ಮನದು ಎಂದು ಗುರುತಿಸಿದೆ. ಶವದ ಮೇಲೆ ನೀಲಿ ಬಣ್ಣದ ಟಿ ಶರ್ಟ ಮತ್ತು ಜೀನ್ಸ್ ಪ್ಯಾಂಟ್, ಕೆಂಪು ಬಣ್ಣದ ಬನಿಯನ್ ಹಾಗೂ ನೀಲಿ ಬಣ್ಣದ ಅಂಡರ್ ವೆರ್ ಇತ್ತು. ಶವದ ತಲೆಯ ಹಿಂಭಾಗದಲ್ಲಿ ರಕ್ತ ದ

ಗಾಯಗಳು ಆಗಿದ್ದವು, ಕುತ್ತಿಗೆಯ ಭಾಗದ ಹತ್ತಿರ ಸುಟ್ಟಿದ ಗಾಯಗಳು ಆಗಿದ್ದವು. ಬಲಮೊಣಕೈ ಮತ್ತು ಬಲಮಂಡಿ ಗಳಲ್ಲಿ ರಕ್ತದ ಗಾಯಗಳಾಗಿದ್ದವು. ನಂತರ ಪೊಲೀಸರವರು ಶವ ತನಿಖಾ ವರದಿ ಮಾಡಿದರು. ಮರಣೋತ್ತರ ಪರೀಕ್ಷೆ ಆದ ಮೇಲೆ ಶವವನ್ನು ನಮ್ಮ ಸುಪರ್ದಿಗೆ ನೀಡಿದರು. ಶವ ತನಿಖಾ ಕಾಲದಲ್ಲಿ ನನ್ನ ಸ್ನೇಹಿತರುಗಳಾದ ಚಾಸಾ–2 ರಿಂದ 4 ರವರು ಇದ್ದರು. ನನ್ನ ತಮ್ಮನ ಶವವನ್ನು ನೋಡಿದಾಗ ಆತನನ್ನು ಯಾರೋ ಮಾರಕಾಸ್ತ್ರಗಳಿಂದ ಹೊಡೆದು ಕೊಲೆ ಮಾಡಿರುತ್ತಾರೆಂದು ಕಂಡು ಬಂತು. ನನ್ನ ತಮ್ಮನಿಗೆ ನಮ್ಮ ಸಂಬಂಧಿಕರಲ್ಲಿ ಮತ್ತು ಆತನ ಸ್ನೇಹಿತರಲ್ಲಿ ಯಾರು ಶತ್ರುಗಳು ಇರಲಿಲ್ಲ. ಪೊಲೀಸರವರು ಶವದಿಂದ ಪಡೆದುಕೊಂಡ ವಸ್ತುಗಳನ್ನು ನಮ್ಮ ಬಳಿ ಇಟ್ಟುಕೊಂಡಿದ್ದೇವೆ ಎಂದು ತಿಳಿಸಿದರು. ನಾನು ಮತ್ತು ನನ್ನ ತಾಯಿ ಪೊಲೀಸ್ ಠಾಣೆಗೆ ಹೋಗಿ ಸದರಿ ವಸ್ತುಗಳನ್ನು ಗುರುತಿಸಿರುತ್ತೇವೆ. ಸದರಿ ವಸ್ತುಗಳನ್ನು ನೋಡಿದರೆ ನಾನು ಗುರುತಿಸಬಲ್ಲೆ. ಈಗ ತೋರಿಸಿದ ನಿಶಾನೆ ಪಿ–3 ಮತ್ತು 4 ಫೋಟೋಗಳಲ್ಲಿ ಕಾಣುವ ವಸ್ತುಗಳು ಶವದಿಂದ ಪೊಲೀಸರು ಅಮಾನತುಪಡಿಸಿಕೊಂಡ ವಸ್ತುಗಳು ಆಗಿರುತ್ತವೆ.

4. ದಿನಾಂಕ 21.12.2017 ರಂದು ಪೊಲೀಸರು ನನಗೆ ಕರೆ ಮಾಡಿ, ಇಬ್ಬರು ಆರೋಪಿತರನ್ನು ಬಂಧಿಸಿದ್ದೇವೆ ಠಾಣೆಗೆ ಬನ್ನಿ ಎಂದು ತಿಳಿಸಿದರು. ಅದೇ ದಿವಸ ನಾನು ಮತ್ತು ನನ್ನ ತಾಯಿ ಠಾಣೆಗೆ ಹೋದೆವು. ಠಾಣೆಗೆ ಹೋದಾಗ ಪೊಲೀಸ್ ಠಾಣೆಯಲ್ಲಿ ಇದ್ದ ಕರಿಬಸವೇಗೌಡ ನನ್ನು ತೋರಿಸಿ, ಈತನೇ ನನ್ನ ತಮ್ಮನನ್ನು ಕೊಲೆ ಮಾಡಿರುವುದಾಗಿ ಪೊಲೀಸರು ನನಗೆ ತಿಳಿಸಿದರು. ನನ್ನ ತಾಯಿಯ ಸದರಿ ಆರೋಪಿಯನ್ನು ನೋಡಿ ಈತನೇ ದಿನಾಂಕ 03.12.2017 ರಂದು ನಮ್ಮ ಮನೆಯ ಹತ್ತಿರ ಬಂದು ನನ್ನ ತಮ್ಮನನ್ನು ಬೈಕ್ ನಲ್ಲಿ ಕರೆದುಕೊಂಡು ಹೋದ ವ್ಯಕ್ತಿ ಎಂದು ಪೊಲೀಸರಿಗೆ ತಿಳಿಸಿದರು. ಸದರಿ ಆರೋಪಿ ನನ್ನ ತಮ್ಮ ಕೊಲೆಯಾದ ಸಮಯದಲ್ಲಿ ಸ್ಯಾನ್‌ಸಿಟಿ ಎಂಬ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ. ಆತ ಬೆಂಗಳೂರಿನಲ್ಲಿ ವಾಸಮಾಡಿಕೊಂಡಿದ್ದ. ನಾನು ಸದರಿ

ಆರೋಪಿಯನ್ನು ಯಾವ ವಿಚಾರಕ್ಕೆ ನನ್ನ ತಮ್ಮ ನನ್ನು ಕೊಲೆ ಮಾಡಿದೆ ಎಂದು ವಿಚಾರಿಸಿದಾಗ, ಆತ ನನ್ನ ತಮ್ಮನ ಜೊತೆ ನಿಶ್ಚಿತಾರ್ಥ ಆಗಿದ್ದ ಚಾಸಾ-9 ನೇತ್ರಾ ಮತ್ತು ತಾನು ಒಂದೇ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇವು, ತಾನು ಆತನನ್ನು ಅವಳನ್ನು ಪ್ರೀತಿ ಮಾಡತ್ತಿದ್ದು ಆದರೆ ಅವನ ಪ್ರೀತಿಯನ್ನು ಆಕೆ ತಿರಸ್ಕಾರ ಮಾಡಿದ್ದಳು, ಆದ್ದರಿಂದ ನನ್ನ ತಮ್ಮನನ್ನು ಕೊಂದರೆ ಚಾಸಾ-9 ನೇತ್ರಾ ನಾನು ಹೇಳಿದ ಹಾಗೇ ಕೇಳಬಹುದು ಎಂದು ಕೊಲೆ ಮಾಡಿರುತ್ತೇನೆ ಎಂದು ತಿಳಿಸಿದ. ಸದರಿ ಆರೋಪಿ ಈ ದಿವಸ ನ್ಯಾಯಾಲಯದ ಮುಂದೆ ಇರುತ್ತಾನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

5. ಕೃತ್ಯ ಮಾಡುವ ಮೊದಲು 1 ನೇ ಆರೋಪಿ, 2 ನೇ ಆರೋಪಿಯಿಂದ ಬೇರೆಯವರ ಹೆಸರಿನಲ್ಲಿ ಸಿಮ್ ನ್ನು ಮತ್ತು ಮೊಬೈಲ್ ನ್ನು ಖರೀದಿ ಮಾಡಿ, ಸದರಿ ಸಿಮ್ ನಿಂದ ನನ್ನ ತಮ್ಮನಿಗೆ ನಾು ಹಾಸನದ ಯೋಗೇಶ್ ಎಂದು ಹೇಳಿ ಕರೆ ಮಾಡಿ, ಪರಿಚಯ ಮಾಡಿಕೊಂಡಿರುತ್ತಾನೆ. 1 ನೇ ಆರೋಪಿ ನನಗೆ ನನ್ನ ತಮ್ಮನಿಗೆ ವಿದ್ಯುತ್ ಶಾಖ ಕೊಟ್ಟು ಕೊಲೆ ಮಾಡಲು ಅದಕ್ಕೆ ಬೇಕಾದ ಗ್ಲೌಸ್, ವೈಯರ್, ಕೋಲುಗಳನ್ನು ತೆಗೆದು ಇಟ್ಟುಕೊಂಡಿದ್ದೆ ಎಂದು ತಿಳಿಸಿದನು. ನಂತರ ದಿನಾಂಕ 03.12.2017 ರಂದು 1 ನೇ ಆರೋಪಿ ನನ್ನ ತಮ್ಮನ ಮನೆಯ ಬಳಿ ಬಂದು, ನನ್ನ ತಮ್ಮನಿಗೆ ವಿದ್ಯುತ್ ಕೆಲಸ ಇರುವುದಾಗಿ ಹೇಳಿ, ನನ್ನ ತಮ್ಮನನ್ನು ಕಗ್ಗಲೀಪುರದ ನಿರ್ಜನ ಪ್ರದೇಶಕ್ಕೆ ಕರೆದುಕೊಂಡು ಹೋಗಿ, ಸದರಿ ಸ್ಥಳದಲ್ಲಿ ಮೊದಲೇ ಸಿದ್ದಪಡಿಸಿ ಇಟ್ಟುಕೊಂಡಿದ್ದ ವಿದ್ಯುತ್ ವೈಯರ್ ನ್ನು ನನ್ನ ತಮ್ಮನ ತಲೆಯ ಹಿಂಭಾಗಕ್ಕೆ ಸ್ಪರ್ಶಿಸಿ, ಆಗ ನನ್ನ ತಮ್ಮ ಸ್ಥಳದಲ್ಲಿ ಕುಸಿದು ಹೋದ ಎಂದು 1 ನೇ ಆರೋಪಿ ನನಗೆ ತಿಳಿಸಿದನು. ನಂತರ 1 ನೇ ಆರೋಪಿ ನನ್ನ ತಮ್ಮ ಸತ್ತಿರುವುದನ್ನು ಖಚಿತ ಪಡಿಸಿಕೊಂಡು, ಕೃತ್ಯಕ್ಕೆ ಬಳಸಿದ ವಸ್ತುಗಳನ್ನು ತೆಗೆದುಕೊಂಡು ಸ್ಥಳದಿಂದ ಹೊರಟು ಹೋದೆವು ಎಂದು 1 ನೇ ಆರೋಪಿ ನನಗೆ ತಿಳಿಸಿದನು. ಆದ್ದರಿಂದ 1 ನೇ ಆರೋಪಿ ಶಿವಬಸವೇಗೌಡ ಮತ್ತು 2 ನೇ

ಆರೋಪಿ ರವಿ ಇಬ್ಬರೂ ಸೇರಿಕೊಂಡು ನನ್ನ ತಮ್ಮನನ್ನು ಕೊಲೆ ಮಾಡಿದ ವಿಚಾರ ನನಗೆ ತಿಳಿದು ಬಂತು. ಈ ಎಲ್ಲಾ ವಿಚಾರಗಳನ್ನು ನಾನು ಪೊಲೀಸರ ಮುಂದೆ ಹೇಳಿರುತ್ತೇನೆ.

**ಪಾಟೀ ಸವಾಲುಃ ಶ್ರೀ ಆರ್.ಕೆ. ವಕೀಲರಿಂದ 1 ಮತ್ತು 2 ನೇ ಆರೋಪಿತರ ಪರವಾಗಿಃ**

ಶ್ರೀ ಆರ್.ಕೆ. ಮತ್ತು ಹೆಚ್.ಕೆ. ವಕೀಲರು ಹಾಜರಿದ್ದು ತಮ್ಮದು ಪಾಟೀ ಸವಾಲು ಮಾಡಲು ಕಾಲಾವಕಾಶ ಕೇಳಿದ್ದರಿಂದ, ಪಾಟೀ-ಸವಾಲನ್ನು ಮುಂದೂಡಲಾಯಿತು.

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ರವೀಂದ್ರ. ಆರ್)
6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.